

## ತ್ರಿಮೂರ್ತಿಗಳ 'ದಂಧೆ'

ಮೂರು ವರ್ಷಗಳ ಹಿಂದೆ ಸೆಟ್ಟೇರಿದ 'ದಂಧೆ ಬಾಯ್ಸ್' ಸಿನಿಮಾ ತೆರೆಕಾಣುವ ಹಂತಕ್ಕೆ ಬಂದು ತಲುಪಿದೆ. ಇದಕ್ಕೆ ಮುನ್ನುಡಿಯ ರೂಪದಲ್ಲಿ ಕಳೆದ ವಾರ ಚಿತ್ರದ 'ಮೋಷನ್ ಪೋಸ್ಟರ್' ಅನಾವರಣಗೊಂಡಿದೆ.

'ದಂಧೆ ಬಾಯ್ಸ್' ಜಗ್ಗೇಶ್ ಪುತ್ರ ಗುರುರಾಜ್ ಮುಖ್ಯಪಾತ್ರದಲ್ಲಿ ನಟಿಸಿರುವ ಸಿನಿಮಾ. ಬದುಕು ಹುಡುಕಿಕೊಂಡು ಹಳ್ಳಿಯಿಂದ ನಗರಕ್ಕೆ ಬರುವ ಹುಡುಗರು, ಇಲ್ಲಿನ ಭೂಗತಲೋಕದಲ್ಲಿ ಸಿಲುಕಿಕೊಳ್ಳುವುದು ಚಿತ್ರದ ಕಥೆ. ಗುರುರಾಜ್ ಜೊತೆಗೆ, ಮಾದೇಶ್ ಹಾಗೂ ಹೇಮಂತ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ನಗರದಲ್ಲಿನ ಡಾನ್‌ನನ್ನು ಅಂತ್ಯಗೊಳಿಸುವ ಈ ತರುಣರ ಬದುಕಿನಲ್ಲಿ ಏನೆಲ್ಲ ಘಟನೆಗಳು ಸಂಭವಿಸುತ್ತವೆ ಎನ್ನುವುದು ಚಿತ್ರದ ಕಥೆ. ಡಾನ್ ಪಾತ್ರದಲ್ಲಿ ಶರತ್ ಲೋಹಿತಾಶ್ವ ಕಾಣಿಸಿಕೊಂಡಿದ್ದಾರೆ. ಭೂಗತಲೋಕದ ಕಥನದಲ್ಲಿ, ಮೂವರು ಹುಡುಗರಲ್ಲೊಬ್ಬನ ನವಿರಾದ ಪ್ರೇಮಕಥನವೂ ಇದೆಯಂತೆ.

ಚಂದ್ರಹಾಸ್ ಚಿತ್ರದ ನಿರ್ದೇಶಕರು. ಕಮರ್ಷಿಯಲ್ ಚಿತ್ರವೊಂದಕ್ಕೆ ಬೇಕಾದ ಎಲ್ಲ ಅಂಶಗಳೂ ತಮ್ಮ ಚಿತ್ರದಲ್ಲಿವೆ ಎನ್ನುವುದು ಅವರ ವಿಶ್ವಾಸ. ಸಂದೇಶ ನೀಡುವ ಗೋಜಿಗೆ ಹೋಗದೆ, ಪ್ರೇಕ್ಷಕರನ್ನು ರಂಜಿಸಲು ಬೇಕಾದ ಎಲ್ಲ ಮಸಾಲೆಯನ್ನೂ ಚಿತ್ರದಲ್ಲಿ ಅವರು ಸೇರಿಸಿದ್ದಾರಂತೆ. ಕ್ರೈಂ ಹಾಗೂ ಸೆಂಟಿಮೆಂಟ್ ಒಳಗೊಂಡ ಕಥೆ ನೋಡುಗರಿಗೆ ಇಷ್ಟವಾಗುವ ನಂಬಿಕೆ ಅವರದು.

ತನುಜಾ ಚಿತ್ರದ ನಾಯಕಿ. ಚಿತ್ರಕ್ಕಾಗಿ ನೂರಾರು ಹುಡುಗಿಯರನ್ನ ಆಡಿಷನ್ ನಡೆಸಿದ ನಂತರ ಆಯ್ಕೆಯಾದ ಅದೃಷ್ಟವಂತೆ ಈಕೆ. ಉತ್ಸಾಹಿ ತಂಡದೊಂದಿಗಿನ ಶೂಟಿಂಗ್ ಅವರಿಗೆ ಖುಷಿಕೊಟ್ಟಿದೆ.

## ಆಪ್ಯಾಯಮಾನ ದೀಪಾ

'ಪರಮಾತ್ಮ' ಚಿತ್ರದಲ್ಲಿ ಸುಮ್ ಸುಮ್ನೆ ನಗುವ ಮೂಲಕ ಚಿತ್ರರಸಿಕರ ಗಮನಸೆಳೆದಿದ್ದ ದೀಪಾ ಸನ್ನಿಧಿ ಈಗ ಮತ್ತೆ ಪ್ರೇಕ್ಷಕರ ಮರುಳು ಮಾಡಲು ಬಂದಿದ್ದಾರೆ. ಅವರ ನಟನೆಯ 'ಚಕ್ರವರ್ತಿ' ಏಪ್ರಿಲ್ 14ರಂದು ತೆರೆ ಕಾಣಲಿದೆ.

'ಚಕ್ರವರ್ತಿ' ದೀಪಾ ಪಾಲಿಗೆ ವಿಶೇಷ ಸಿನಿಮಾ. ದರ್ಶನ್ ಅಭಿನಯದ ಈ ಸಿನಿಮಾ ತನ್ನ ಅದ್ದೂರಿ ಮೇಕಿಂಗ್‌ನಿಂದಾಗಿ ಹಾಗೂ ದರ್ಶನ್ ವರ್ಚಸ್ಸಿನಿಂದಾಗಿ ಗಾಂಧಿನಗರದ ಗಮನಸೆಳೆದಿದೆ. ಈ ಮುನ್ನ 'ಸಾರಥಿ' ಚಿತ್ರದಲ್ಲಿ ದರ್ಶನ್‌ಗೆ ಜೋಡಿಯಾಗಿ ನಟಿಸಿದ್ದ ದೀಪಾ, ಇದೀಗ 'ಚಕ್ರವರ್ತಿ'ಯಲ್ಲೂ ನಾಯಕಿ. ಇತ್ತೀಚಿನ ದಿನಗಳಲ್ಲಿ ಗಾಂಧಿನಗರದಲ್ಲಿ ಹೆಚ್ಚು ಕಾಣಿಸಿಕೊಳ್ಳದಿದ್ದ ದೀಪಾ ಪಾಲಿಗೆ ಇದು ಪುನರಾಗಮನದ ಸಿನಿಮಾ ಕೂಡ.

ದೀಪಾ ಅವರ ಸ್ನಿಗ್ಧ ಚೆಲುವು 'ಚಕ್ರವರ್ತಿ'ಯ ವಿಶೇಷಗಳಲ್ಲೊಂದು. ದರ್ಶನ್ ಪಾಲಿಗೂ ಇದು ಮಹತ್ವಾಕಾಂಕ್ಷೆಯ ಸಿನಿಮಾ. ಅವರ ಇತ್ತೀಚಿನ ಸಿನಿಮಾಗಳು ದೊಡ್ಡ ಗೆಲುವನ್ನೇನೂ ಕಂಡಿಲ್ಲ. ಹಾಗಾಗಿ 'ಚಕ್ರವರ್ತಿ' ಮೂಲಕ ಅವರು ಮತ್ತೆ ದೊಡ್ಡ ಯಶಸ್ಸಿನ ಹಂಬಲದಲ್ಲಿದ್ದಾರೆ. ಎ.ವಿ. ಚಿಂತನ್ ನಿರ್ದೇಶನದ ಈ ಸಿನಿಮಾ ಭೂಗತಜಗತ್ತಿನ ತವಕತಲ್ಲಣಗಳ ಕಥನ ಒಳಗೊಂಡಿದೆ. ದರ್ಶನ್ ಸೋದರ ದಿನಕರ್ ಚಿತ್ರದಲ್ಲಿ ಖಳನ ಪಾತ್ರದಲ್ಲಿ ನಟಿಸಿದ್ದಾರೆ.

'ಚಕ್ರವರ್ತಿ' ಚಿತ್ರವನ್ನು ಗೆಲ್ಲಿಸಲು ಚಿತ್ರತಂಡ ಟೊಂಕ ಕಟ್ಟಿ ನಿಂತಿದೆ. ಸಾಮಾಜಿಕ ಜಾಲತಾಣಗಳನ್ನು ಚಿತ್ರದ ಪ್ರಚಾರಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಚಿತ್ರದ ಟ್ರೈಲರ್ ಕೂಡ ದೊಡ್ಡ ಸುದ್ದಿ ಮಾಡಿದೆ. 'ಹೆಬ್ಬುಲಿ' ಹಾಗೂ 'ರಾಜ್‌ಕುಮಾರ' ಸಿನಿಮಾಗಳ ಗೆಲುವು ಗಾಂಧಿನಗರದಲ್ಲಿ ಉತ್ಸಾಹ ಮೂಡಿಸಿದೆ. ಈ ಸಾಲಿಗೆ 'ಚಕ್ರವರ್ತಿ'ಯೂ ಸೇರಿಕೊಂಡಲ್ಲಿ ಕನ್ನಡ ಚಿತ್ರೋದ್ಯಮದ 2017ರ ಮೊದಲ ತ್ರೈಮಾಸಿಕದಲ್ಲಿ ಸಾಧಿಸಿರುವ ಯಶಸ್ಸು ಎರಡನೇ ಭಾಗಕ್ಕೂ ವಿಸ್ತರಿಸಿಕೊಳ್ಳಲಿದೆ.

